# ಸಸ್ಯ ಸಂರಕ್ಷಣೆ ಅಗತ್ಯ: ಸ್ವರ್ಣವಲ್ಲೀ ಶ್ರೀ

ಪ್ರಜಾವಾಣಿ ವಾರ್ತೆ

**ಶಿರಸಿ:** ಗಿಡಗಳನ್ನು ನೆಟ್ಟರಷ್ಟೇ ಆಗುವುದಿಲ್ಲ, ಅದರ ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಅರಣ್ಯ ಇಲಾಖೆಯ ಸಹಕಾರದಲ್ಲಿ ಮಠದ ಸಸ್ಯಲೋಕದಲ್ಲಿ ಮಂಗಳವಾರ ನಡೆದ ಪವಿತ್ರ ವೃಕ್ಷಾರೋಪಣದಲ್ಲಿ ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಸ್ಯ ಸಂರಕ್ಷಣೆ ಅಗತ್ಯ, ಅದರ ಸಂಪೂರ್ಣ ಜವಾಬ್ದಾರಿಯನ್ನು ನಾವು ಹೊರಬೇಕು. ಅದರ ಪಾಲನೆಯನ್ನೂ ಮಾಡಬೇಕು. ಅದು ನಮ್ಮ ಕರ್ತವ್ಯ ಎಂದರು.

ಮಠದ ಕಿರಿಯ ಸ್ವಾಮೀಜಿ ಆನಂದಭೋದೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿ, ವೃಕ್ಷಾರೋಪಣ ಮಾಡಿದರು. ಇಲಾಖೆ ಅಧಿಕಾರಿಗಳು, ಮಠದ ಪದಾಧಿಕಾರಿಗಳಿದ್ದರು. 100ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು.



ಶಿರಸಿಯ ಸ್ವರ್ಣವಲ್ಲೀ ಮಠದ ಸಸ್ಯಲೋಕದಲ್ಲಿ ನಡೆದ ಪವಿತ್ರ ವೃಕ್ಷಾರೋಪಣದಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಆನಂದಬೋಧೇಂದ್ರ ಸ್ವಾಮೀಜಿ ಸಸಿಗಳನ್ನು ನೆಟ್ಟರು